Vidyagiri
DHARWAD-04.

ಅಂಕಣ – ಮೂರು

## ಕಲ್ಲಣೆಸದಿರು ಕಂಡು ತಾಳು........!

### ವಿಚಿತ್ರ ವ್ಯಕ್ತಿತ್ವದ ವ್ಯಕ್ತಿಗಳು

• ಡಾ. ಆರ್. ವ್ಹಿ. ಪಾಟೀಲ

ಆತ್ಮವಿಶ್ವಾಸ ಪ್ರತಿಯೊಬ್ಬರಲ್ಲೂ ಇರಲೇಬೇಕು. ಒಂದು ವೇಳೆ ಇಲ್ಲವಾದರೆ, ಇಂಥಹ ಆತ್ಮ ವಿಶ್ವಾಸದ ಕೊರತೆಯಿಂದ ಅವರು ದಿನೇ ದಿನೇ ಹಿಂಜರಿಕೆ, ಅಪಮಾನ, ತಪ್ತ ಮನಸ್ಥಿತಿ ಹೊಂದುತ್ತಾ ಮಾನಸಿಕ ನಿಶ್ಶಕ್ತತನವನ್ನು ಅನುಭವಿಸುತ್ತಾರೆ. ಸೋಮಾರಿತನ, ಮಂಡುತನ, ಜಡತ್ವ, ವಿಚಿತ್ರ ರೀತಿಯ ಅಹಂಕಾರ, ದುರ್ಗುಣಗಳು, ಕೆಟ್ಟ ಆಲೋಚನೆ, ಬೇರೆಯವರ ಬಗ್ಗೆ ಕೆಟ್ಟದಾಗಿ ಅಪಹಾಸ್ಯ ಮಾಡುವುದು ಸದಾ ಇತರರಲ್ಲಿ ತಪ್ಪನ್ನೇ ಗ್ರಹಿಸಿ ತನ್ನ ಒಳ್ಳೆಯತನವನ್ನು ತಾನೆ ಮೆಚ್ಚಿಕೊಳ್ಳುವುದು. ಚಾಡಿ ಹೇಳುವಿಕೆ, ಅಂಜಬುರುಕುತನ ಹಾಗೂ ಒಬ್ಬರನ್ನು ಕುರಿತು ಅವರಿಲ್ಲದಾಗ ಅವರನ್ನು ಪ್ರೀತಿಸುವ ಆತ್ಮೀಯರಲ್ಲಿ ಇಲ್ಲದ್ದನ್ನು ಕಲ್ಪಿಸಿ ಹೇಳಿ, ಅವರಿಬ್ಬರ ಬಾಂಧವ್ಯ ಹಾಳುಮಾಡುವುದು. ಹಾಗೆ ತಾನೂ ಅನರ್ಹ, ಯೋಗ್ಯತೆಯಿಲ್ಲದವ, ಸಾಮರ್ಥ್ಯವಿಲ್ಲದವ ಎಂದು ತಿಳಿದೂ 'ಅಂತರಂಗದಲ್ಲಿ ಸೋತು' ಬಹಿರಂಗದಲ್ಲಿ ಗೆದ್ದವರಂತೆ ಠಿವಿಯಿಂದ ಪೋಸು ಕೊಡುತ್ತಾ ಮಹಾ ಕಳವಳದಲ್ಲಿ ಬಳಲುತ್ತಿರುತ್ತಾರೆ.

ಇಂತಹ ಮನಸ್ಥಿತಿಯು ಹಂತದಲ್ಲಿ ತಾನೇ ಸೃಷ್ಟಿಸಿಕೊಂಡ ಜಗತ್ತಿನಲ್ಲಿ ಒಂದಿಷ್ಟು ತನಗೆ ಪೈಪೋಟಿ ನೀಡುವವರಿದ್ದಾರೆ, ನಾನು ಅವರಿಗೇನು ಕಡಿಮೆ ಎಂದು ಅಂಥವರೊಂದಿಗೆ ನಾನು ಅವರಿಗಿಂತ ಪರಿಪೂರ್ಣವಾದ ಸಾಮರ್ಥ್ಯವುಳ್ಳ ವ್ಯಕ್ತಿಯೆಂದು; ತೋರಿಸುವ ಆಸೆಯಿಂದ ಅವರಿಗಿಂತ ಹೆಚ್ಚುಗಾರಿಕೆಯಲ್ಲಿ ಬಟ್ಟೆ ತೊಡುವುದು ಉತ್ತಮ ಮಾತುಗಾರಿಕೆ, ಲೋಕೋಕ್ತಿ, ಶುಭಾಶಿತ, ನುಡಿಮುತ್ತು, ಶರಣರ ವಚನಗಳನ್ನು ಹೇಳುವುದು, ವ್ಯಾಟ್ಸ್‌ಆಪ್, ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡುವುದರೊಂದಿಗೆ ನಾನು ಸರಿ ಇದ್ದೇನೆ ಎನ್ನುವುದುನ್ನು ತೋರ್ಪಡಿಸಲು ಹಾಗೂ ಬೇರೆಯವರ ಗಮನ ಸೆಳೆಯಲು ಪ್ರಯತ್ನಿಸುತ್ತಿರುತ್ತಾರೆ. ಹಾಗೆ ಇನ್ನು ಏನೋ ದೈಹಿಕ; ಮಾನಸಿಕವಾಗಿ ಸ್ಪರ್ಧೆಗಿಳಿದವರಂತೆ ಸ್ಪರ್ಧಾರ್ಥಿಗಳಾಗಿ ತಮ್ಮ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಾ ವಿಚಿತ್ರವಾಗಿ ವರ್ತಿಸುವರು. ಇವೆಲ್ಲವನ್ನೂ ಬೇರೆಯವರ ಗಮನ ಸೆಳೆಯುವುದಕ್ಕಾಗಿಯೇ ಮಾಡುವರು. ಕಾರಣ ಎಲ್ಲಿ ನಮ್ಮನ್ನು ಯಾರೂ ಗಮನಿಸುವರೋ ಇಲ್ಲವೋ ಎಂಬ ಬಲವಾದ ಆತ್ಮವಿಶ್ವಾಸದ ಕೊರತೆ, ಬರೀ ಬೇರೆಯವರ ಹೊಗಳಿಕೆಯ ಬಾಯಿರುಚಿಯನ್ನೇ ಬಯಸುವ ಮನಸ್ಥಿತಿ ಹೊಂದಿರುವವರು. ಆತ್ಮ ವಿಶ್ವಾಸದ ಕೊರತೆ ಸರಿಯಾದ ತಿಳುವಳಿಕೆ ಇಲ್ಲದೇ ಇರುವುದು ಹೀಗೆ ಬೇರೆಯವರ ಗಮನ ಸೆಳೆಯಲು ಮಾಡುವ ಇಂತಹ ಪ್ರಯತ್ನದಲ್ಲೂ ಏನೋ ಮಾಡಲು ಹೋಗಿ ಇಲ್ಲಿಯೂ ಜಯ ಗಳಿಸದೇ ತೊಂದರೆ ಮಾಡಿಕೊಳ್ಳುತ್ತಾರೆ. ತಮ್ಮ ಸಾಮರ್ಥ್ಯ, ತಮ್ಮ ವ್ಯಕ್ತಿತ್ವ, ಗುಣ, ಸ್ವಭಾವಗಳನ್ನು ನಿಯಂತ್ರಿಸುವ ಶಕ್ತಿ ಇಲ್ಲದ ಇವರು, ಬೇರೆಯದನ್ನು ಹೇಗೆ ನಿಯಂತ್ರಿಸಲು ಸಾಧ್ಯ. ಸದಾ ತಮ್ಮ ಬಗ್ಗೆ ಆತ್ಮ ವಿಶ್ವಾಸವಿಲ್ಲದ ಮನೋಭಾವದ ವ್ಯಕ್ತಿಗೆ ಸೃಷ್ಟಿಯೇ ಬರಡಾಗಿ ಕಾಣುವುದು, ತಪ್ಪಾಗಿ ಕಾಣುವುದು, ಕೇಳಿದ್ದು ನೋಡಿದ್ದೆಲ್ಲವೂ ಹೆಚ್ಚಾಗಿ ಅಪಾರ್ಥವೆನಿಸುವುದು. ಹಾಗಾಗಿ ಇಂತವರು ಯಾವಾಗಲೂ 'ನೆಗೆಟಿವ್' ಮಾತೇ ಆಡುವುದು ಹೆಚ್ಚಿರುತ್ತದೆ. ಇಂತಹ ನಕಾರಾತ್ಮಕ ವಿಚಾರಗಳಿಂದ ಪದೇ ಪದೇ ತೊಂದರೆಗೆ ಸಿಲುಕುವುದು ಸತ್ಯ. ಅಂತಹ ತೊಂದರೆಗಳು ಮತ್ತೆ ಮತ್ತೆ ಬರುವುದರಿಂದ ಖಿನ್ನತೆ ಹೆಚ್ಚಾಗಿ, ಸೈಕಾಲಾಜಿಕಲ್ ಡಿಸ್ಆರ್ಡರ್‌ಗೆ ಒಳಗಾಗಿ ವಿಚಿತ್ರ ವರ್ತನೆಯಿಂದ ಚಟದ ದಾಸರಾಗಿ ತನ್ನ ಸುತ್ತ ಮುತ್ತಲಿನವರ ಬಗ್ಗೆ ಅಗ್ರೆಸಿವ್ ಹಾಗೂ ನೆಗೆಟಿವ್ ಭಾವ ಬೆಳೆಸಿಕೊಂಡು ತಾವು ತೊಂದರೆಪಡುವುದಲ್ಲದೇ ತಮ್ಮ



PRINCIPAL
J.S.S. Banashankari Arts, Commerce &
Shantikumar Gubbi Science College,
DHARWAD - 580 004.